RW-1

ಇಂದು ದಿ.10-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಎದುರುದಾರರ ಪರ ಶ್ರೀ ಎನ್ ಕೆ ವಕೀಲರಿಂದ.

ನಾನು ಈ ಪ್ರಕರಣದ ಎದುರುದಾರನಿದ್ದು, ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿದ್ದು, ಅದನ್ನು ಓದಿ , ತಿಳಿದುಕೊಂಡು ಅದಕ್ಕೆ ಸಹಿ ಮಾಡಿದ್ದೇನೆ.

ದಿ.31-03-2016 ರಂದು ಹರಿಹರ ಶಿವಮೊಗ್ಗ ಮಾರ್ಗದಲ್ಲಿ ದೇವರಬೆಳಕೆರೆ ಸಬ್ ಸ್ಟೇಷನ್ ಲೈನ್ ನ ಕಾಮಗಾರಿ ಮುಗಿದಿದ್ದ ಬಗ್ಗೆ ಪತ್ರ ಹಾಜರುಪಡಿಸಿದ್ದು , ಅದನ್ನು ನಿಆರ್-1 ಎಂದು ಗುರುತಿಸಲಾಯಿತು.

<u>ಪಾಟೀಸವಾಲುಃ-</u> ಅರ್ಜಿದಾರರ ಪರ ಶ್ರೀ ಎಸ್.ಆರ್.ಎ. ವಕೀಲರಿಂದ.

ವಿದ್ಯುತ್ ಲೈನ್ ಎಳೆದ ನಂತರ ದಿನಪತ್ರಿಕೆಯಲ್ಲಿ ನೋಟೀಸನ್ನು ಕೊಟ್ಟಿದ್ದನ್ನು ಹೊರತುಪಡಿಸಿದರೆ, ಅರ್ಜಿದಾರರಿಗೆ ನೋಟೀಸನ್ನು ನಾವು ಖುದ್ದಾಗಿ ಕೊಟ್ಟಿಲ್ಲ. ಲೈನ್ ಎಳೆದ ಜಾಗದಲ್ಲಿ ಎತ್ತರವಾದಂತಹ ಮರಗಳನ್ನು ಹಾಗೂ ತೆಂಗು, ಅಡಿಕೆ ಬೆಳೆಯಲು ಸಾಧ್ಯವಿಲ್ಲ ಹಾಗೂ ಕಟ್ಟಡಗಳನ್ನು ಸಹ ಕಟ್ಟಲು ಸಾಧ್ಯವಿಲ್ಲ. ಲೈನ್ ಎಳೆದ ಪಕ್ಕದಲ್ಲಿ ಗಿಡಗಳನ್ನು ಬೆಳದಲ್ಲಿ, ಆ ಗಿಡದ ಟೊಂಗೆಗಳು ಲೈನ್ ಗೆ ತಾಗುತ್ತಿದ್ದಾಗ ಅವುಗಳನ್ನು ಕತ್ತರಿಸುತ್ತಾರೆ. ಈ ರೀತಿ ಇರುವುದರಿಂದ ಪ್ರತಿವರ್ಷ ರೈತರ ವಾಣಿಜ್ಯ ಬೆಳೆಗೆ ತೊಂದರೆಯುಂಟಾಗುತ್ತಾಯಿರುತ್ತದೆ ಎನ್ನುವುದು ಸುಳ್ಳು. ಲೈನ್ ಎಳೆಯುವ ಸಮಯದಲ್ಲಿ ಬೆಳೆ ನಷ್ಟ ಪರಿಹಾರ ಮಾತ್ರ ಕೊಟ್ಟಿರುತ್ತೇವೆ. ಯಾವ ಯಾವ ಅರ್ಜಿದಾರರಿಗೆ ಎಷ್ಟು ಎಷ್ಟು ಕೊಟ್ಟಿರುತ್ತೇವೆ ಅಂತಾ ಈಗ ಹೇಳಲು ಆಗುವುದಿಲ್ಲ. ಸಾಕ್ಷಿ ಮುಂದುವರೆದು ಲೈನ್ ಎಳೆಯುವ ಸಮಯದಲ್ಲಿ ಬೆಳೆ ಇದ್ದರೆ ಮಾತ್ರ ಬೆಳೆ ನಷ್ಟ ಪರಿಹಾರ ಕೊಟ್ಟಿರುತ್ತೇವೆ. ಬೆಳೆ ನಷ್ಟ ಪರಿಹಾರ ಹೊರತುಪಡಿಸಿ ಬೇರೆ ಯಾವುದೇ ಪರಿಹಾರ ಅರ್ಜಿದಾರರಿಗೆ ಕೊಟ್ಟಿಲ್ಲ. ಅರ್ಜಿದಾರರಿಗೆ ಭೂ ಪರಿಹಾರ ಕೊಡುವುದನ್ನು ತಪ್ಪಿಸುವ ಸಲುವಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಅರ್ಜಿದಾರರಿಗೆ ಭೂ ಪರಿಹಾರ ಕೊಟ್ಟಿಲ್ಲ. ಇದೇ ಲೈನ್ ನಲ್ಲಿರುವ ಇನ್ನುಳಿದ ಅರ್ಜಿದಾರರು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ಧು ಆ ಪ್ರಕರಣದಲ್ಲಿ ನಾವು ಪರಿಹಾರ ಕೊಟ್ಟಿರುತ್ತೇವೆ ಎನ್ನುವುದು ಸುಳ್ಳು. ಈ ಲೈನ್ ಗೆ ಸಂಬಧಪಟ್ಟ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಲಾಗಿದೆ ಎನ್ನುವುದು ಸುಳ್ಳು. ಅರ್ಜಿದಾರರು ನಮ್ಮನ್ನು ಭೇಟ್ಟಿಯಾಗಿ ಮೌಖಿಕವಾಗಿ ಭೂ ಪರಿಹಾರ ಕೊಡಿ ಎಂದು ಕೇಳಿದರೂ ಸಹ ಕೊಡುತ್ತೇವೆ ಅಂತಾ ಹೇಳಿ ನಾವು ಪರಿಹಾರ ಕೊಟ್ಟಿಲ್ಲ ಎನ್ನುವುದು ಸುಳ್ಳು. ಮುಖ್ಯ ವಿಚಾರಣೆಯಲ್ಲಿ ಬರೆದಿರುವ ವಿಚಾರಗಳು ಸಂಪೂರ್ಣ ಸುಳ್ಳಿನಿಂದ ಕೂಡಿವೆ ಎನ್ನುವುದು ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ಕೊಡಲು ನಾವು ಬಾಧ್ಯಸ್ಥರಿರುತ್ತೇವೆ ಎನ್ನುವುದು ಸುಳ್ಳು. ಲೈನ್ ನ್ನು ಆಗಾಗ ನಿರ್ವಹಣೆ ಮಾಡುತ್ತಿರುತ್ತೇವೆ ಎನ್ನುವುದು ನಿಜ. ಆ ಸಮಯದಲ್ಲಿ ರೈತರ ಬೆಳೆ ಇದ್ದಾಗ ಬೆಳೆ ನಷ್ಟ ಉಂಟಾಗಬಹುದು ಎನ್ನುವುದು ಸರಿಯಲ್ಲ. ಬೆಳೆ ನಷ್ಟ ಉಂಟಾಗುತ್ತಿದ್ದರೂ ಸಹ ನಷ್ಟ ಉಂಟಾಗುವುದಿಲ್ಲ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಸದರಿ ಲೈನ್ ಎಳೆದಂತಹ ಎಲ್ಲಾ ಜಮೀನಿನ ರೈತರಿಗೆ ಪರಿಹಾರ ಕೊಟ್ಟಿರುವುದರಿಂದ ಈ ಅರ್ಜಿದಾರರಿಗೆ ನಾವು ಪರಿಹಾರ ಕೊಡಲು ಬಾಧ್ಯಸ್ಥರು ಎನ್ನುವುದು ಸರಿಯಲ್ಲ. ಅರ್ಜಿದಾರರ ಜಮೀನಿನಲ್ಲಿ ಎಷ್ಟು ಭಾಗದಲ್ಲಿ ಲೈನ್ ಎಳೆಯಲಾಗಿದೆ ಎಂದು ಅಳತೆ ಕೊಡಲು ನಮಗೆ ಬರುವುದಿಲ್ಲ, ಅದನ್ನು ಸರ್ವೆ ಇಲಾಖೆಯವರು ಕೊಡಬೇಕಾಗುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಅರ್ಜಿದಾರರ ಜಮೀನಿನ ಎಷ್ಟು ಕ್ಷೇತ್ರದಲ್ಲಿ ಲೈನ್ ಎಳೆಲಾಗಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಿಖರವಾಗಿ ನಮಗೆ ಸರ್ವೆ ನಂಬರ್ ಮಾತ್ರ ಗೊತ್ತಾಗುತ್ತದೆ, ಆದರೆ ಯಾವ ಯಾವ ಸರ್ವೆ ನಂಬರ್ ನಲ್ಲಿ 200 ಮೀಟರ್ ಉದ್ದ ಕ್ಷೇತ್ರದಲ್ಲಿ ಎಳೆಯಲಾಗಿದೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. 2015 ರ ಗೈಡ್ಲೈನ್ಸ ಪ್ರಕಾರ ಭೂ ಪರಿಹಾರವನ್ನು ಅರ್ಜಿದಾರರಿಗೆ ಕೊಡಬೇಕಾದ ಕರ್ತವ್ಯ ನಮ್ಮದಾಗಿರುತ್ತದೆ ಎನ್ನುವುದು ಸರಿಯಲ್ಲ. ಗೈಡ್ ಲೈನ್ಸ ಪ್ರಕಾರ ನಾವು ನ್ಯಾಯಾಲಯದಲ್ಲಿ ಪರಿಹಾರ ಡೆಪಾಸಿಟ್ ಮಾಡಲು ಬರುವುದಿಲ್ಲ. ಅರ್ಜಿದಾರರಿಗೆ ಪರಿಹಾರ ಕೊಡುವುದನ್ನು ತಪ್ಪಿಸುವ ಸಲುವಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಮೆಸರ್ ಮೆಂಟ್ ಮಾಡಲು ನಾವೇ ಜವಾಬ್ದಾರರು ಎನ್ನುವುದು ಸುಳ್ಳು.

<u>ಮರು ವಿಚಾರಣೆಃ-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿ,ಹೇಳಿ,ಕೇಳಿ,ಸರಿಯಾಗಿದೆ.

ಸಹಿ/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರು, ದಾವಣಗೆರೆ.